237

ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲು ಸದರೀ ಲೈಸೆನ್ಸುದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾಕಾಲವ ಗುತ್ತಿಗೇ ಹಣವು ಕೂಡ್ಲೆ ಪಾವತಿಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ಮೊಬಲಗು ಜಮ್ಮಿ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳು ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನ ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಕ್ಕೀರಿಗೆ ಲೈಸೆನ್ಸುದಾರನ್ನಾಗಲಿ ಯಾ ಅತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಅತಂಕ ಪಡಿಸುವದಿಲ್ಲ.

1896–97ನೇ ಸಾಲಿಗೆ ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ಹರಾಜು.

ನಂ. 8032—E. X. 245, ತಾರೀಖು 6ನೇ ಮಾರ್ಚಿ 1896.

1. ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ * ವಿವರಿಸಲ್ಪಟ್ಟಿರುವ ಗೊತ್ತಾದ ಪ್ರದೇಶಗಳಲ್ಲಿ ಯಾ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ 1896ನೇ ಇಸವಿ ಜುಲೈ ದುರ್ಯೋ ತಾರೀಖು ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರ್ ಸೂಲ್ ಅಖೈರ್‌ವರಿಗೆ ಸಾರಾಯಿಯನ್ನು ಬಿಕರಿಮಾಡುವ ಒಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯೂಟಿ ಕಮ್ಮಿಷನರುಗಳಿಂದ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮ್ಮಿಷನರುಗಳಿಂದ ಶಿವಮೊಗ್ಗ ಡಿಸ್ಟ್ರಿಕ್ಟಿನ ಹರಾಜನ್ನು ಆ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್‌ನಲ್ಲಿಯೂ ಇತರ ಡಿಸ್ಟ್ರಿಕ್ಟುಗಳ ಬಾಬತನ್ನು ಆಯಾ ಡಿಸ್ಟ್ರಿಕ್ಟುಗಳ ತಾಲ್ಲೂಕು ಕಸಬಾಗಳಲ್ಲಿಯೂ ಮೇಲ್ಕಂಡ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಹರಾಜ್ ಹಾಕಲ್ಪಡಲು ಮೈಸೂರ್ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜ್‌ಗಳು ಸದರೀ ತಾರೀಖುಗಳಲ್ಲಿ ಪೂರೈಸದೇಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳ ಪೈಕಿ ಒಂಟಿಯಾಗಿ ಯಾವದಕ್ಕಾದರೂ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಹರಾಜ್ ಹಾಕುವ ಆಫಿಸರರು ಬಂದಕ್ಕಿಂತ ಹೆಚ್ಚು ಫಿರ್ಕಾಗಳನ್ನ ಸೇರಿಸಿಯಾಗಲಿ ಫಿರ್ಕಾಗಳನ್ನ ತಾಲ್ಲೂಕುವಾರ್ ಹರಾಜ್ ಮಾಡುವದರ ಮೂಲಕವಾಗಿ ಆಗಲಿ ಯಾ ಹಾಲಿ ಅಂಗಡಿಗನ್ನುಂಟಾಗದೆ ಇರುವ ವಿಶೇಷ ಫಿರ್ಕಾಗಳನ್ನು ಮುಂದೆ ಭೈಸಲ್ಮಾಡಲು ಅವಶ್ಯಕ ವಿದ್ದರೆ ಉಳಿಸಿಕೊಳ್ಳುವದರ ಮೂಲಕವಾಗಲಿ ಯುಕ್ತಾನುಸಾರ ಸದರೀ ಫಿರ್ಕಾಗಳನ್ನ ಬದಲಾಯಿಸಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಒಟ್ಟು ಸ್ವಾತಂತ್ರ್ಯದ ಹಕ್ಕು ಫಿರ್ಕಾವಾರ್ ಹರಾಜ್ ಮಾಡಲ್ಪಡುತ್ತೆ, ಹರಾಜ್ ಮಾಡಲ್ಪಟ್ಟ ಪ್ರತಿ ಫಿರ್ಕಾವೂ ಅಂಗೀಕರಿಸಲ್ಪಡತಕ್ಕ ಛಡ ಸವಾಲ್‌ದಾರನಿಗೆ ಡೆಪ್ಯೂಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುವದು. ಡೆಪ್ಯೂಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಸವಾಲನ್ನ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಡೋಣವು ಸವಾಲನ್ನ ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

3. ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಅಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಅಗಲಿ ಹಾಜರಾಗಬೇಕು. ಯಾವದಾದರೊಂದು ಫಿರ್ಕಾದ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಕೊಡಲ್ಪಟ್ಟ ಸವಾಲುದಾರನು ಎರಡನೇ ಫಿರ್ಕಾದ ಹರಾಜ್ ಪ್ರಾರುವಾಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲನ್ನಿನಲ್ಲಿ ಇಪ್ಪತ್ತರಲ್ಲಿ ಒಂದು ಭಾಗಕ್ಕೆ ಸರಿಯಾದ ಮೊಬಲಗನ್ನು ತೇವಣೀ ಇಡಬೇಕು. ಮತ್ತು ಡೆಪ್ಯೂಟಿ ಕಮ್ಮಿಷನರವರಿಂದ ಹರಾಜ್ ಮಂಜೂರಾದ ಸಂಗತಿಯು ಆತನಿಗೆ ಲಿಖಿತಮೂಲಕ ತಿಳಿಸಲ್ಪಟ್ಟ ಹದಿನೈದು ದಿವಸಕೆಳೊಳಗಾಗಿ ಮೊದಲು ಇಡೋಣಾದ ತೇವಣೀ ಜೇಖಿಲ್ ಆತನ ಎರಡು ತಿಂಗಳ ಗುತ್ತಿಗೇ ಹಣಕ್ಕೆ ಸಮಾನವಾಗುವಷ್ಟು ತೇವಣೀಯನ್ನಿಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿರುವ ತೇವಣಿ ಮೊಬಲಗನ್ನು ಸರ್ಕಾರಕ್ಕೆ ಪಂಡವಾಗಿ ಶೇರಿಸಿಕೊಳ್ಳಾವದಲ್ಲದೆ ಡೆಪ್ಯೂಟಿ ಕಮ್ಮಿಷನರವರು ಅಪ್ಪಣೆ ಕೊಡುವ ರೀತ್ಯ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ತಕ್ಷಣವೇ ಪುನಃ ಹರಾಜ್ ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು.

4. ಮೇಲ್ಕಂಡ 3ನೇ ಕಲಂ ಪ್ರಕಾರ ನಡಿಸಲ್ಪಡುವ ದುಸರೇ ಹರಾಜ್‌ಗಳು ತಪ್ಪಿಸ್ಥನಾದ ಮೇಲ್ಕಂಡ ಸವಾಲ್‌ದಾರನ ಜವಾಬ್ದಾರೀಮೇಲೆ ನಡಿಸಲ್ಪಡುವವು. ಸದರೀ ಸವಾಲ್‌ದಾರನು ಯಲ್ಲಾ ಆದಾಯವನ್ನೂ ಕಳ್ದುಕೊಳ್ಳತಕ್ಕದ್ದಲದೆ ದುಸರೇ ಹರಾಜಿನಿಂದ ಸರ್ಕಾರಕ್ಕೆ ನಷ್ಟವಾದ ಪಕ್ಷದಲ್ಲಿ ಷರೂ ಹರಾಜಿನ ಷರತ್ತುಗಳನ್ನನುಸರಿಸಿ ಮೇಲ್ಕಂಡ ಪೂರಾ ಕಾಲಕ್ಕೆ ಆತನಿಂದ ಪಾವತಿಯಾಗಬೇಕಾಗಿದ್ದ ಒಟ್ಟು ಮೊಬಲಗಿನಲ್ಲಿ ದುಸರೇ ಹರಾಜಿನಲ್ಲಿ ಪಡದ ಸವಾಲ್‌ದಾರನಿಂದ ಪಾವತಿಯಾಗತಕ್ಕ ಒಟ್ಟು ಮೊಬಲಗನ್ನು ವಜಾ ಮಾಡಿದರೆ ಉಳಿಯುವ ಶೇಷವನ್ನು ಆತನು ಪಾವತೀ ಮಾಡತಕ್ಕದ್ದು. ಈ ಸಂದರ್ಭದಲ್ಲಿ ದಂಡವಾಗಿದಾಖಲ್ಮಾಡಲ್ಪಟ್ಟ ತೇವಣೀ ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕ್ಕೊಸ್ಕರ ವಜಾ ಮಾಡಲ್ಪಡತಕ್ಕದ್ದು. ತದನಂತರ ಬಾಕಿ ಏನಾದರೂ ನಿಂತಲ್ಲಿ ಆ ಮೊಬಲಗು ಜಮ್ಮಿ ಕಂದಾಯವು ಯಾವ ರೀತಿಯಾಗಿ ವಸೂಲ್ಮಾಡಲ್ಪಡುತ್ತೋ ಅದೇ ರೀತಿಯಾಗಿ ವಸೂಲ್ಮಾಡಲ್ಪಡುವದು. ಪರಂತು ದಂಡವಾಗಿ ದಾಖಲ್ಮಾಡಲ್ಪಟ್ಟ ತೇವಣೀ

* ಪಟ್ಟಬಗ್ಯೆ 1896ನೇ ಇಸವಿ ಮಾರ್ಚಿ 26ನೇ ಮಂಗಳವಾರದ ಸಪ್ಲಿಮೆಂಟ್ ಗೆಜೆಟ್ಟನ್ನು ನೋಡಬೇಕಾಗ್ಗದ್ದು.

238

ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕ್ಕಿಂತ ಹೆಚ್ಚಾಗಿರುವ ಪಕ್ಷದಲ್ಲಿ ಅಂಥಾ ಪೂರಾ ಶೇವಣೀ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

5. ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಕೆಳಗೆ ಉದಹರಿಸಲ್ಪಟ್ಟಿರುವ ಪರತ್ತುಗಳನ್ನ ಆಚರಿಸುವದಕ್ಕೆ ಬದ್ಧನಾಗಿರಲುಳ್ಳವನೆಂದು ಒಂದು ಕರಾರನ್ನು ಬರದು ರುಜುಮಾಡಿ ಕೊಡತಕ್ಕದ್ದು. ಕೊಂಡು ಕೊಂಡವನು ಕರಾರನ್ನ ಸೈ ಮಾಡುವದಕ್ಕೆ ತಪ್ಪಿದಲ್ಲಿ ಯಾ ತಿರಸ್ಕರಿಸಿದಲ್ಲಿ ಮೊದಲೇ ಇಡಲ್ಪಟ್ಟ ವಿಶಿಷ್ಟ ಶೇವಣೀ ಮೊಬಲಗೂ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು 3 ಮತ್ತು 4ನೇ ಕಲಂಗಳಲ್ಲಿ ನಮೂದಿಸಿರುವಂತೆ ಸದರೀ ಪ್ರಥಮ ಖರೀದೀದಾರನ ಜವಾಬ್ದಾರಿ ವ ನಷ್ಟಕ್ಕೆ ಗುರಿಯಾಗಿ ದುಸರೇ ಹರಾಜ್ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದೆಂ. ಹರಾಜ್ ಮಂಜೂರಾದ ಮೇಲೆ ಸದರೀ ಖರೀದೀದಾರನು ಸತ್ತು ಹೋದ ಪಕ್ಷದಲ್ಲಿ ಆತನ ವಾರಸುದಾರರು ಯಾ ಆತನಿಂದ ಹಕ್ಕನ್ನು ಪಡದವರು ಸದರೀ ಕರಾರಿಗೆ ಜವಾಬ್ದಾರರಾಗಿರುತಾರೆ.

6. ಹಿಂದಿನ ಕೆಲವು ಸಾಲುಗಳಲ್ಲಿ ಹಾಲಿ ಫಿರ್ಕಾಗಳ ಬಾಬತು ಅಂಗಡಿಗಳಲ್ಲಿಯೂ ಮತ್ತು ಕೋರಿಗಳಲ್ಲಿಯೂ ಖರ್ಚಾದ ಸಾರಾಯಿಯ ತಪಶೀಲೂ ಮತ್ತು ಪ್ರತಿ ಫಿರ್ಕಾದ ಗುತ್ತಿಗೆ ವೊಬಲಗೂ ವಗೈರೆ ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಕರಾರು ಬರದುಕೊಟ್ಟ ಕೂಡ್ಲೆ ಖರೀದೀದಾರನಿಗೆ ಡೆಪ್ಯುಟಿ ಕಮ್ಮಿಷನರವರು ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟು ವಿಧಿಸಲ್ಪಟ್ಟ ನಮೂನೆಯಲ್ಲಿ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ನಮೂದಿಸಿ ಬಂದು ಲೈಸೆನ್ಸನ್ನು ಕೊಡುವರು.

(1) ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ಸಾಧಾರಣವಾಗಿ 20° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರುವದಕ್ಕೆ ಮಾತ್ರವೇ ಲಗಾವಾಗುತ್ತೆ. ಪರಂತು ಡೆಪ್ಯುಟಿ ಕಮ್ಮಿಷನರವರ ಯಾ ಇವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫಿಸರರ ವಿಶೇಷ ಅಪ್ಪಣೆ ಮೂಲಕ 30° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನೂ ಮಾರಬಹುದು. ಆದರೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರಾಗುವ ಯಾವ ಜೋರಿನದಾದರೂ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣೀ ಭಟ್ಟೀ ಇಳಸಲ್ಪಟ್ಟಿರುವ ಷರಾಬ್‌ಗಳನ್ನೂ ಮತ್ತು ಇತರ ವಿಶೇಷವಾದ ಸಾರಾಯಿಗಳನ್ನೂ ಮಾರಲಿಕ್ಕೆ ಹಕ್ಕು ಇರುವದಿಲ್ಲವು. ಈ ಷರಾಬುಗಳನ್ನೂ ವ ಸಾರಾಯಿಗಳನ್ನೂ ಮಾರಲಿಕ್ಕೆ ಪರಾಯಿ ದೇಶದ ಸಾರಾಯಿಗಳ ಅಂಗಡಿಕಾರ್ರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡದುಕೊಂಡದಕ್ಕೆ ಕೊಡಬೇಕಾದ ವೊಬಲಗು ಸರ್ಕಾರದಿಂದ ಆ ಭಾಗ್ಯ ವಿಧಾಯಕವಾಗಿ ಅಚ್ಚು ಹಾಕಿಸಲ್ಪಟ್ಟಿರುವ ಜರ್ಲಗಳ ಮೂಲಕ ಸ್ಥಳೀಯವಾದ ಸರ್ಕಾರದ ಏಜಾನೆಗಳಿಗೆ 1896ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತೂ ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳನ ಗುತ್ತಿಗೇ ವೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿ ಮಾಹೆಯ ಇಜಾರೇ ವೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿಮಾಡಲ್ಪಡಬೇಕು. ಹಾಂಗೆ ಪಾವತಿಮಾಡಲ್ಕೆ ತಪ್ಪಿದರೆ ಆಮಲ್ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಲೈಸೆನ್ಸು ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರಹಮೂಲಕವಾಗಿ ರಿಕಾರ್ಡುಮಾಡಿ ಮಾಹೆ ಆಖೈರ್ ಆವಕೂಡಲೆ ಸಾಧ್ಯವಾದಷ್ಟುತ್ವರೆಯಲ್ಲಿ ಇಜಾರೆಯನ್ನು ಮರಳಿ ಹರಾಜು ಮಾಡತಕ್ಕದ್ದು. ಪರಂತುಮೇಲ್ಕಂಡಂತೆ ಇಜಾರೆಯನ್ನು ಪುನಃ ವಿಕ್ರಯಿಸುವದಕ್ಕೆ ಬದಲಾಗಿ ಡೆಪ್ಯುಟಿ ಕಮ್ಮಿಷನರವರು ಅವರ ಯುಕ್ತಾನುಸಾರ ಹಾಂಗೆ ತಪ್ಪಿಹೋದ ಇಜಾರೆಯನ್ನು ಹಾಲಿ ಇರತಕ್ಕ ಅದಕ್ಕೆ ಶೇರಿದದುಕ್ಕಾವಾರಾಗಿ ವಿಂಗಡಿಸಲ್ಪಟ್ಟ ಪ್ರತಿ ಬೇರೆ ಬೇರೆ ದುಕ್ಕಾದಾರನಿಗೂ ಅವನು ಪಾವತಿ ಮಾಡುವದಕ್ಕೆ ಒಪ್ಪುವ ಗುತ್ತಿಗೆ ವೊಬಲಗಿಗೋಸ್ಕರ ಒಂದು ಲೈಸೆನ್ಸು ಕೊಡುವಂತೆ ಅಮಲ್ದಾರರಿಗೆಹುಕುಂ ಕೊಡಬಹುದು. ಪರಂತು ಹೀಂಗೆ ಕೊಡೋಣಾವ ಗುತ್ತಿಗೆಯ ಒಟ್ಟು ವೊಬಲಗು ತಪ್ಪಿಹೋದ ಇಜಾರೆದಾರನು ಪಾವತಿ ಮಾಡುವದಕ್ಕೆ ಒಪ್ಪಿ ಇದ್ದ ವೊಬಲಗಿಗಿಂತಲೂ ಕಮ್ಮಿ ಆಗಿರಕೂಡದು.

(3) ಲೈಸೆನ್ಸಿನಿಂದ ಇಡಲ್ಪಟ್ಟ ಶೇವಣೀ ವೊಬಲಗು ಇಜಾರೆ ವಾಯಿದೆಯ ಆಖೈರ್ ಎರಡು ತಿಂಗಳ ಖಿಸ್ತು ವೊಬಲಗಿಗೋಸ್ಕರ ತೆಗದುಕೊಳ್ಳಲ್ಪಡುವದು. ಪರಂತು ಮೇಲ್ಕಂಡಂತೆ ಎರಡನೇ ಸಬ್ ಕ್ಲಾಸಿನ ನಿಯಮಗಳನುಸರಿಸಿ, ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟಾಗ ಅಥವಾ ವಿಂಗಡಿಸಲ್ಪಟ್ಟಾಗ ಸದರೀ ಡಿವಾಜಿಟ್ ವೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ದಂಡವಾಗಿ ಆದರೂ ತೆಗೆದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದವನಿಂದ ಬರಬೇಕಾದ ಬಾಕೀಗೋಸ್ಕರ ಪೂರಾ ಇಜಾರೆಯು ದುಸರೇ ಹರಾಜು ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತೀಮಾಡುವ ಬಗ್ಗೆ ಉಪಯೋಗಿಸಲ್ಪಡಬಹುದು. ಅಂಥಾ ಬರಬೇಕಾದ ಬಾಕಿಗಳೂ ಮತ್ತು ನಷ್ಟಗಳ ವೊಬಲಗುಗಳೂ ಸುದಾ ರವಿನ್ಯೂ ಕಂದಾಯದ ಬಾಕಿ ವಸೂಲಿಬಗ್ಗೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಕೇಕಷ್ಟಾ ಸೇಲಿಯಾನಾ ಆರ್ಡರ್ಸಿಂತೆ ಆಗುವ ಒಡ್ಡೀ ಚೇಖಿಲ್ ಲೈಸೆನ್ಸುದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸುದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷ್ಷನ್ ಅಥವಾ ಇಜಾರೇ ವೊಬಲಗನ್ನು ಕಮ್ಮಿಮಾಡುವ ಬಗ್ಗೆ ಅಥವಾ ಈಡುವೊಬಲಗು ಪಡೆಯುವ ಬಗ್ಗೆ ಕೇಳಲ್ಪಡಕೂಡದು.

2/9

(4) (a) ಈ ಸರ್ಕಾರಕ್ಕೆ ಸಾರಾಯಿಯನ್ನೂ ಒಳದೇಶದ ಇತರ ಪದಾರ್ಥಗಳನ್ನೂ ತಯಾರ್ಮಾಡಲಿಕ್ಕೆ ಮೊ ಕರರ್ಮಾಡಲ್ಪಟ್ಟಿರುವ ಭಟ್ಟೀವಾರ್ದ ವ್ಯಾರಿ ಅಂಡಿಕೋ ಎಂಬ ವರ್ತಕರಿಂದಾಗಲಿ ಯಾ ಸರ್ಕಾರದ ಅಪ್ಪಣೆ ಮೇರೆ ಏರ್ಪಾಡಾಗುವ ಯಾವದಾವರೊಂದು ಬಾಂಡೆಡ್ ಡಿಪ್ಪೋಯಿಂದಾಗಲಿ ಲೈಸೆನ್ಸ್ ದಾರನು ತನ್ನ ಫಿರ್ಕಾ ಅಂಗಡಿಗಳಿಗೆ ಸರಬರಾಯಿಗೋಸ್ಕರ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಅಂಥಾ ಭಟ್ಟೀದಾರ್ರಿಂದ ಸರಬರಾಯಿ ಆಗುವ ಸಾರಾಯಿನ ದರವು 20° ಡಿಗ್ರಿ, ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲ್ಲ 1ಕ್ಕೆ 10½ ಆಣೆಪ್ರಕಾರವೂ ಮತ್ತು ಸದರೀ ಜೋರಿಗಿಂತ ಕಮ್ಮಿ ಜೋರುಳ್ಳ ಸಾರಾಯಿಗಳಿಗೆ ಕ್ಯಾಸಲ್ಲಾ ಎಂಬುವರ ಸೂತ್ರಗಳನ್ನನುಸರಿಸಿ ಅದೇ ದಾಮಾಷಾಯಿ ದರಗಳ ಪ್ರಕಾರವೂ ಇರತಕ್ಕದ್ದು. ಲೈಸೆನ್ಸದಾರನು 20° ಡಿಗ್ರಿ, ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲ್ಲ 1ಕ್ಕೆ 5—5—0 ದರದ ಪ್ರಕಾರವು ಸದರೀ ಜೋರಿಗಿಂತ ಕಮ್ಮಿ ಯಾದ ಸಾರಾಯಿಗಳಿಗೆ ಅವರ ದಾಮಾಷಾಯಿ ದರದಂತೆಯೂ ಜನಗಳಿಗೆ ಮಾರತಕ್ಕದ್ದು.

(b) ಮೇಲ್ಕಂಡ ಖರೀದ್ಕಿ ದರ ಶಿವಾಯಿ ಡಿಸ್ಟಿಲೇರಿಯಾನೆ ಭಟ್ಟೀ ಗಡಂಗಿನಿಂದ ಯಾ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪ್ಪೋಯಿಂದ ಸಾರಾಯಿ ಬಯ್ಯಲ್ಪಡುವದಕ್ಕೆ ಪೂರ್ಪ 20° ಡಿಗ್ರಿ ಅಂಡರ್‌ಪ್ರೂಫ್ ಜೋರುಳ್ಳ ಸಾರಾಯಿಯ ಗ್ಯಾಲ್ಲ 1ಕ್ಕೆ 4 ರೂಪಾಯಿ ದರದಂತೆ ಎಕ್ಸೈಜ್ ಡ್ಯೂಟಿಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಸ್ಥಳೀಯ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(5) ಲೈಸೆನ್ಸದಾರನು ಮೇಲ್ಕಂಡ ಡ್ಯೂಟಿ ಮೊಬಲಗನ್ನು ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಿ ವಿಧಿಸೋಣಾಗಿರುವ ನಮೂನೆಯಲ್ಲಿ ಬಂದು ರಶೀತಿಯನ್ನು ಪಡಿಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿಯು ಸರಬರಾಯಿಗೆ ಬಂದು ದರಖಾಸ್ತನ್ನೂ ಹಾಜರ್ಪಡಿಸಿ ಅಂಥಾ ಷರಾಬಿಗೆ ವಿಧಿಸಿರುವ ಖರೀದಿಯನ್ನು ಭಟ್ಟೀದಾರರಿಗಾಗಲಿ ಯಾ ಅವರ ಏಜಂಟರಿಗಾಗಲಿ ಯಾ ಈ ಬಗ್ಗೆ ಸರ್ಕಾರದಿಂದ ನೆಮಿಸಲ್ಪಡುವ ಯಾವ ಮನುಷ್ಯನಿಗಾಗಲಿ ಪಾವತಿ ಮಾಡಿದ ನಂತರ ಡಿಸ್ಟಿಲೇರಿ ಜಿಮ್ಮೇಲಿರುವ ಅಸಿಸ್ಟೆಂಟ್ ಸೂಪರ್ ವೈಜರ್ ಅಥವಾ ಇತರ ಆಫಿಸರರು ಯಾ ಬಾಂಡೆಡ್ ಡಿಪ್ಪೋ ಜಿಮ್ಮೇದಾರನು ಟ್ರೆಜರೀ ಆಫಿಸರ್ರ ರಶೀತಿಯಲ್ಲಿ ನಮೂದ್ಮಾಡಿರುವ ಡ್ಯೂಟಿ ಮೊಬಲಗ್ಕೆ ಸರಿಯಾದ ಸಾರಾಯಿಯನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿರುವ ತಾರೀಖು ಮತ್ತು ಘಂಟೆ ನಮ್ಮೂದ್ಮಾಡಿ ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಫಿಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು ಅಸಿಸ್ಟೆಂಟ್ ಸೂಪರ್ ವೈಜರವರು ಅಥವಾ ಮೇಲೆ ಹೇಳಲ್ಪಟ್ಟ ಇತರ ಆಫಿಸರರು ಯಾ ಬಾಂಡೆಡ್ ಡಿಪ್ಪೋ ಜಿಮ್ಮೇದಾರನು ವಿಧಾಯಕವಾಗಿರುವ ನಮೂನೆಯಲ್ಲಿ ಡಿಸ್ಟಿಲೇರಿ ಅಥವಾ ವೇರ್ ಹೌಸಿನಿಂದ ಸಾರಾಯಿ ರವಾನೆ ಮಾಡುವದಕ್ಕೋಸ್ಕರ ಜಾರೀಲಿರುವ ನಿಬಂಧನೆಗಳ ಪ್ರಕಾರ ವಿಧಾಯಕವಾದ ನಮೂನೆಯಲ್ಲಿ ದ್ವಿಪ್ರತಿಯಾಗಿ ರಹದಾರಿಯನ್ನು ಕಳುಹಿಸತಕ್ಕದ್ದು. ಬಾಂಡೆಡ್ ಡಿಪ್ಪೋಯಿಂದ ಸಾರಾಯಿಯನ್ನು ಪಡಿಯುವಂಥಾ ಲೈಸೆನ್ಸದಾರನು ಅಂಥಾ ಸಾರಾಯಿಯ ಖರೀದಿಯನ್ನೂ ಮತ್ತು ಡ್ಯೂಟಿ ಮೊಬಲಗನ್ನೂ ಸಹ ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಬೇಕು.

(6) ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿನ ಲೈಸೆನ್ಸದಾರನು ತನ್ನ ಫಿರ್ಕಾ ಸರಹದ್ದಿನಲ್ಲಿ ಡೆಪ್ಯೂಟಿ ಕಮ್ಮಿಷನರವರಿಂದಲೂ ಮತ್ತು ತನ್ನಿಂದಲೂ ಅವಶ್ಯಕವೆಂದು ಎಣಿಸಲ್ಪಡತಕ್ಕ ಸ್ಥಳ ಯಾ ಸ್ಥಳಗಳಲ್ಲಿ ಕೋಠಿ ಯಾ ಕೋಠಿಗಳನ್ನು ಸ್ಥಾಪಿಸತಕ್ಕದ್ದು. ಈ ಕೋಠಿಗಳಿಗೆ ತಾನು ಖರೀದಿಗೆ ಪಡದ ಸಾರಾಯಿಯನ್ನು ಅಂಗಡಿಕಾರರಿಗೆ ಕೊಡುವದಕ್ಕೆ ತತ್ಪೂರ್ವವೇ ಹಾಲಿ ಜಾರೀಲಿರುವ ನಿಬಂಧನೆಗಳನ್ನನುಸರಿಸಿ ರವಾನಿಸಿದ ಸರಕನ್ನು ವೊಕಾಬಿಲೆ ವಗ್ಗೆರೆ ಮಾಡತಕ್ಕ ಬಗ್ಗೆ ತೆಗದುಕೊಂಡು ಹೋಗತಕ್ಕದ್ದು. ಸದರೀ ಕೋಠಿಗಳು ಡೆಪ್ಯೂಟಿ ಕಮ್ಮಿಷನರವರ ಯಾ ಎಕ್ಸೈಜ್ ಇಲಾಖೆ ಇತರ ಆಫಿಸರರ ತನಿಖೆ ಬಗ್ಗೆ ಸದಾ ಖುಲ್ಲಾಮಾಗಿರತಕ್ಕದ್ದು. ವಿಧಾಯಕವಾದ ನಮೂನೆಯಲ್ಲಿ ಡೆಪ್ಯೂಟಿ ಕಮ್ಮಿಷನರವರಿಂದ ಲೈಸೆನ್ಸ್ ಹೊಂದದೆ ಅಂಥಾ ಕೋಠಿಯು ಇಡಲ್ಪಡಲಾಗದು. ಉಳಿದ 7 ಡಿಸ್ಟ್ರಿಕ್ಟುಗಳ ಲೈಸೆನ್ಸದಾರರಿಂದ ಈಗಿನ ಹಾಗೆ ಶಿಬ್ಬಂದಿ ವ ಬಾಡಿಗೆ ಖರ್ಚುಗಳು ಭರಿಸಲ್ಪಟ್ಟು ಅವರು ಹಾಲಿ ಜಾರೀಲಿರುವ ಬಾಂಡೆಡ್ ಡಿಪ್ಪೋಗಳಿಂದಲೇ ಸಾರಾಯಿ ಸರಬರಾಯಿ ಪಡೆಯಬೇಕಲ್ಲದೆ ಅವರ ಅಂಗಡಿಗಳಿಗೆ ರವಾನೆ ಮಾಡಲು ಸದರೀ ಡಿಪ್ಪೋಗಳಲ್ಲಿ ಅದನ್ನು ಇಡತಕ್ಕದ್ದು.

(7) ಡಿಸ್ಟಿಲೇರಿ ಯಾ ಬಾಂಡೆಡ್ ಡಿಪ್ಪೋಯಿಂದ ಯಾ ಫಿರ್ಕಾ ಕೋಠಿಯಿಂದ ರವಾನಿಸಲ್ಪಟ್ಟ ಸ್ಥಿತಿಯಲ್ಲಿ ಸಾರಾಯಿಯು ಮಾರಲ್ಪಡತಕ್ಕದ್ದು. ಮತ್ತು ಅಂಗಡಿಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಂತ ಕೆಡಿಸಲ್ಪಡಲಾಗದು ಯಾ ನೀರಿನಿಂದ ಮಿಕ್ಕೆಮಾಡಲಾಗದು.

(8) ಲೈಸೆನ್ಸದಾರನು ತನ್ನಿಂದ ಖರೀದಿಗೆ ತಗದುಕೊಳ್ಳಲ್ಪಟ್ಟ ಮತ್ತು ಅಂಗಡಿಕಾರರಿಗೆ ಕೊಟ್ಟ ಸಾರಾಯಿಯ ಪರಿವ್ಯಾಣವನ್ನೂ ಮತ್ತು ಜೋರನ್ನೂ ಕುರಿತು ಸರಿಯಾದ ಲೆಕ್ಕಗಳನ್ನಿಡಬೇಕು. ಅತನಿಂದ ಕೊಂಡುಕೊಳ್ಳಲ್ಪಟ್ಟ ಸಾರಾಯಿಯೊಡನೆ ರವಾನಿಸಿದ ರಹದಾರಿಗಳು ಹಾಲಿ ಜಾರೀಲಿರುವ ಯಾ

ಮುಂದೆ ಆಗಿಂದ್ಯಾಗ್ಗೆ ಸರ್ಕಾರದಿಂದ ಸಾದರ್ಪಡಿಸಲ್ಪಡಬಹುದಾದ ನಿಬಂಧನೆಗಳನ್ನ ನುಸರಿಸಿ ಅಜಮಾಯಿಷಿಗೂ ವ ತನಿಖೆಗೂ ಗುರಿಯಾಗತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರಿಂದ ಕ್ರಮವಾಗಿ ಲೈಸೆನ್ಸು ಪಡದ ದುಕಾ೯ಗಳಲ್ಲಿ ವಿನಹ ಮತ್ತೆಲ್ಲಿಯೂ ಸಾರಾಯಿ ಬಿಕರೀ ಮಾಡಲಾಗದು ಮತ್ತು ಎಕ್ಸೈಜ್ ಕಮ್ಮಿಷನರವರ ಮುಂಚಿತವಾದ ಪುಂಜೂರಾತಿ ಇಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು.

(10) ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋಜಿದಾಗ ಯಾವ ದುಕಾ೯ಗಳನ್ನಾಗಲಿ ಮುಚ್ಚಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಲು ಅಪ್ಪಣೆ ಕೊಡಬಹುದು.

(11) ಲೈಸೆನ್ಸದಾರನು ತನ್ನ ಲೈಸೆನ ವಾಯಿದೆ ವಳಗೆ ಲೈಸೆನಿನಲ್ಲಿ ವ್ಯಕ್ತಪಟ್ಟಿರುವ ಫಿರ್ತಿನ ಯಾವ ಭಾಗವಲ್ಲಾದರೂ ಶೇಂದೀ ಮಾರತಕ್ಕ ಬಿಟ್ಟು ಸ್ವತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನು ಇಟ್ಟುಕೊಳ್ಳಕೂಡದು. ಅಥವಾ ಅವನ ಫಿರ್ತಿನ ಯಾವ ಭಾಗದಲ್ಲಾದರೂ ಶೇಂದೀ ಬಿಕರೀ ಮಾಡತಕ್ಕ ಬಿಟ್ಟು ಸ್ವತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನೂ ಒಳದೇಕದ ಸಾರಾಯಿ ಮಾರುವ ತನ್ನ ಬಿಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಅಗಲಿ ಯಾ ಸಂಬಂಧವುಳ್ಳವನನ್ನಾಗಿ ಅಗಲಿ ಇಟ್ಟುಕೊಳ್ಳಕೂಡದು; ಅಥವಾ ತನ್ನ ಲೈಸೆನಿನ ವಾಯಿದೆ ಅಂಪರ್‌ವಾರ್ ಎಕ್ಸೈಜ್ ಕಮ್ಮಿಷನರವರ ಲಿಖಿತ ಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈ ಕೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿ ದೇಶದ ಯಾ ಶೀಮೆಯಲ್ಲಾಗಲಿ ಲೈಸೆನ್ಸದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(12) ಲೈಸೆನ್ಸದಾರನು 1896ನೇ ಇಸವಿ ಜುಲೈ ಗುರಿಯಲ್ಲಿ ತನ್ನ ಫಿರ್ಕಾದೊಳಗಿರುವ ಹಾಲಿ ಬಾಂಡೆಡ್ ಡಿಪೋದಲ್ಲಿ ಯಾ ಫಿರ್ಕಾ ಕೋಠಿಯಲ್ಲಿ ಯಾ ಅತನ ಅಂಗಡಿಗಳಲ್ಲಿ ಹಾಜರಿರತಕ್ಕ ವಾಯಿದೆ ವಿಾರದ ಗುತ್ತಿಗೆದಾರನ ಬಾಬತು ದಾಸ್ತಾನ ಸಾರಾಯಿಯನ್ನು ಎಕ್ಸೈಜ್ ಕಮ್ಮಿಷನರ್ ಸಾಹೆಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಪೂರ್ವದಗುತ್ತಿಗೇದಾರನಿಗೆ ಪಾವತಿಮಾಡಿ ತೆಗದುಕೊಳ್ಳಲು ಗುರಿಯಾಗಿರತಕ್ಕದ್ದು.

(13) ಲೈಸೆನ್ಸದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ನಿಬಂಧನೆಗಳಿಗೂ ಅಥವಾ ಆಗಿಂದ್ಯಾಗ್ಗೆ ಎಕ್ಸೈಜ್ ಕಾನೂನುಗಳ ಪ್ರಕಾರ ವಿಧಿಸೋಣಾಗುವ ಹೆಚ್ಚು ನಿಬಂಧನೆಗಳಿಗೂ ಅನುಸಾರವಾಗಿ ನಡದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ಸರ್ಕಾರದಿಂದ ಆಗಿಂದ್ಯಾಗ್ಗೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನ ಉಪಯೋಗಿಸತಕ್ಕದ್ದು. ಮತ್ತು ಸಾರಾಯಿಯನ್ನು ಸಾಗಿಸುವ ಬಗ್ಗೆ ಬೇಕಾದ ಲೆಕ್ಕ, ರಹದಾರಿ ಅಥವಾ ಪ್ಯಾಸ್ ಇವುಗಳಿಗೆ ವಿಧಾಯಕವಾದ ನಮೂನೆಗಳನ್ನು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ವದಗಿಸಿಕೊಳ್ಳತಕ್ಕದ್ದು.

(14) ಈ ಗುತ್ತಿಗೆಯು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(15) ತೆಗದುಕೊಳ್ಳಲ್ಪಟ್ಟಿದ್ದ ಫಿರ್ಕಾಗಳ ಪುರಾ ಯಾ ಒಂದು ಭಾಗಕ್ಕಾಗಿ ಒರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರವರು ವಿಚಾರ ಮಾಡದೇ ತಿರಸ್ಕರಿಸುವರು.

8. ಲೈಸೆನ್ಸದಾರನಿಂದಲಾಗಲಿ ಯಾ ಅತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಅತನ ನೌಕರಿಯಲ್ಲಿರುವ ಯಾವ ಮನುಷ್ಯನಿಂದಲಾಗಲಿ ಮೇಲ್ಕಂಡ ಷರತ್ತುಗಳು, ಯಾ ಲೈಸೆನಿನ ಕರಾರುಗಳು ಉಲ್ಲಂಘಿಸಲ್ಪಟ್ಟ ಪಕ್ಷದಲ್ಲಿ ಯಾ ಅತನು ಅಂಗಡಿಗಳನ್ನು ತೆಗಿಯುವದರಲ್ಲಿ ಅಸ್ರದ್ಧೆಯಾಗಿದ್ದಲ್ಲಿ ಯಾ ಗುತ್ತಿಗೇ ಕೆಲಸದಲ್ಲಿ ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯಕೊಡಲು ತಪ್ಪಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಪ್ರತಿಯೊಂದು ಉಲ್ಲಂಘನೆಗೆ 50 ರೂಪಾಯಿಗಳಿಗೆ ಮಿಾರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ತೀರ್ಮಾನ ಇಡಲ್ಪಟ್ಟಿರುವ ಮೊಬಲಗು ದಂಡವಾಗಿ ದಾಖಲ್ಮಾಡಿಕೊಳ್ಳಲ್ಪಟ್ಟಿರುತೆಂದು ಹುಕುಂ ಮಾಡಲಿಕ್ಕೂ, ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರೀ ಮೇಲೆ ಸದರೀ ಸರ್ವ ಸ್ವತಂತ್ರದ ಹಕ್ಕನ್ನು ಪುನಃ ಪರಾಜ ಮಾಡಲಿಕ್ಕೂ, ಯಾ ಅಂಥಾ ಗುತ್ತಿಗೇ ಫಿರ್ಕಾವನ್ನು ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತಾರರಾಗಿರತಕ್ಕದ್ದು. ಇದರಿಂದ ಉಂಟಾದ ಎಲ್ಲಾ ನಷ್ಟವನ್ನೂ 1896ನೇ ಇಸವಿ ಜುಲೈ ಗುರ್ತೀ ತಾರೀಖಿನಲ್ಲಿ ತನ್ನ ಅಂಗಡಿಗಳನ್ನು ತೆಗದು ಕೆಲಸ ನಡಿಸುವದರಲ್ಲಿ ಅಸ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ಎಲ್ಲಾ ನಷ್ಟಗಳನ್ನೂ ದೀವಾಲ್ ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪುರಾ ಕಾಲದ ಗುತ್ತಿಗೇ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗುತ್ತೆ. ಅಂಥಾ ಎಲ್ಲಾ ದಂಡದ ವ ನಷ್ಟದ ಮೊಬಲಗುಗಳೂ ಜಮಿರ್ಾಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ವಿಧಿಸೋಣ, ತೀರ್ಮಾನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸು ರದ್ದು ಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನು ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸದಾರನನ್ನಾಗಲಿ, ಯಾ ಅತನ ಪಿಜಂಟನ್ನಾಗಲಿ, ಯಾ ಅತನ ನೌಕರರನ್ನಾಗಲಿ ಅಪಾದಿಸಿ ದಾಖ್ಲೆ ಕ್ರಮ ನಡಿಸಲು ಅತಂಕ ಪಡಿಸುವದೆಂದು ಭಾವಿಸಲ್ಪಡಕೂಡದು.